# ಬಸವನೆಂಬ ನಿಬ್ಬೆರಗು

'ಬ' ಎಂಬಲ್ಲಿ ಎನ್ನ ಭವ ಹರಿಯಿತ್ತು
'ಸ' ಎಂಬಲ್ಲಿ ಸರ್ವಜ್ಞನಾದೆನು
'ವ' ಎಂಬಲ್ಲಿ ವಚಿಸುವಡೆ ಚೈತನ್ಯಾತ್ಮಕನಾದೆನು
ಇಂತೀ ಬಸವಾಕ್ಷರತ್ರಯವೆನ್ನ ಸರ್ವಾಂಗದಲ್ಲಿ
ತೊಳಗಿ ಬೆಳಗುವ ಭೇದವನರಿದು
ಆನೂ ನೀನೂ ಬಸವಾ ಬಸವಾ ಬಸವಾ
ಎನುತಿರ್ದೆವಯ್ಯಾ ಗುಹೇಶ್ವರಾ

ಜಾಗತಿಕ ತತ್ವಜ್ಞಾನಿ ಅಲ್ಲಮಪ್ರಭು, ಬಸವಣ್ಣನವರ ವ್ಯಕ್ತಿತ್ವದ ಇದಿರು ನತಮಸ್ತಕರಾಗಿ ಹೇಳಿದ ವಚನವಿದು. ಭಾರತದ ಎಲ್ಲ ದಾರ್ಶನಿಕ ಧಾರೆಗಳನ್ನು ಜಾಲಾಡಿ ಗುಣಗ್ರಾಹಿಯಾಗುವುದರೊಂದಿಗೆ ಅವುಗಳಲ್ಲಿನ ಅಪಸವ್ಯಗಳನ್ನು ಕುರಿತು ನಿರ್ಭಿಡೆಯಿಂದ ಟೀಕಿಸಿದ ಅಲ್ಲಮ ತಾನೂ ಬಸವಣ್ಣನಿಂದ ಉಪಕೃತ್ಯನಾಗಿದ್ದೆನೆಂದು ಬಸವಣ್ಣನವರ ಲೋಕೋತ್ತರ ಮಹತಿಯನ್ನು ಎತ್ತಿತೋರಿಸಿದ್ದಾರೆ.

ಇಂದು ನಾವು ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿ ಹೆಮ್ಮೆ ಪಡುತ್ತಿರುವುದು ಸುಖಾ ಸುಮ್ಮನೆ ಅಲ್ಲ. ಅಥವಾ ಯಾವುದೋ ಸಮುದಾಯವೊಂದನ್ನು ಓಲೈಸಲು ಕೈಗೊಂಡಿರುವ ಉಪಕ್ರಮವೂ ಅಲ್ಲ. 12ನೇ ಶತಮಾನದ ಕ್ರಾಂತಿಕಾರಿ, ಮಹಾಮಾನವತಾವಾದಿ, ಸಮತೆಯ ರೂವಾರಿ, ಅವೈಜ್ಞಾನಿಕ ಕರ್ಮಸಿದ್ಧಾಂತದ ಬುಡಕ್ಕೆ ಕೊಡಲಿ ಪೆಟ್ಟು ನೀಡಿದ್ದ ಬಸವಣ್ಣನವರನ್ನು ರಾಜ್ಯದ ಹೆಮ್ಮೆ ಎಂದು ಹೇಳಿಕೊಳ್ಳಲು ಯಾರದೆ ಓಲೈಕೆಗಳ ಅವಶ್ಯಕತೆಯೇ ಬರದು. ಬಸವಣ್ಣ ತಮ್ಮ ಸಮಕಾಲೀನ ಸಂದರ್ಭದಲ್ಲಿಯೇ ಜಗದ ಬೆಳಕಾಗಿ ಪರಿಣಮಿಸಿದ್ದಕ್ಕೆ 12ನೇ ಶತಮಾನದ ಶಿವಶರಣರ ವಚನಗಳೆ ಸಾಕ್ಷಿಯಾಗಿವೆ.

ಒಟ್ಟು 24 ವಚನಕಾರರು 157ವಚನಗಳಲ್ಲಿ 407 ಬಾರಿ ಬಸವಣ್ಣನವರನ್ನು ಸ್ಮರಿಸುತ್ತಾರೆ. ಹಾಗೆಂದು ಇಲ್ಲಿ ವ್ಯಕ್ತಿಪೂಜೆ ಇಲ್ಲ. ಪ್ರಾಯಶಃ ತಮ್ಮ ಸಮಕಾಲೀನರಿಂದ ಈ ಪರಿ ಗೌರವಕ್ಕೆ ಒಳಗಾದ ವ್ಯಕ್ತಿ ಇನ್ನೊಬ್ಬರಿಲ್ಲ. ಒಂದೆಡೆ ಚಾತುರ್ವರ್ಣ ವ್ಯವಸ್ಥೆಯನ್ನು ಅಲ್ಲಗಳೆದು, ದೇವಾಲಯ ಸಂಸ್ಕೃತಿಯನ್ನು ಧಿಕ್ಕರಿಸಿದ ಇವರು ಉಗ್ರ ಸನಾತನಿಗಳಿಂದ ಸತತ ಕಿರುಕುಳ ಮತ್ತು ಗಡಿಪಾರು ಶಿಕ್ಷೆಗೆ ಒಳಗಾಗಿದ್ದರೆ ಇನ್ನೊಂದೆಡೆ ಅಸಂಖ್ಯ ಶೂದ್ರ ಸಮುದಾಯಗಳಿಂದ ಅಪಾರ ಗೌರವಕ್ಕೆ ಪಾತ್ರರಾಗುತ್ತಾರೆ. ಸನಾತನಿಗಳು ನಂಬಿಸಿಕೊಂಡು ಬಂದಿದ್ದ ಪೊಳ್ಳು ಸಿದ್ಧಾಂತಗಳ ಬಣ್ಣವನ್ನು ಬಯಲಿಗೆಳೆದಿದ್ದರು.

ಈವರೆಗೆ ಮನುಷ್ಯರೆಂದೇ ಪರಿಗಣಿಸದಿದ್ದ ದಮನಿತ ಸಮುದಾಯಗಳನ್ನು ಸೇರಿಸಿಕೊಂಡು ದುಡಿಯುವವರ ನಿತ್ಯದ ಅನುಭವಗಳೇ ಅನುಭಾವದ ಮೆಟ್ಟಿಲು. ವೇದ ಪ್ರಮಾಣ ಪೊಳ್ಳು. ಅನುಭಾವ ಪ್ರಮಾಣ ನಿತ್ಯ ಸತ್ಯ ಎಂದು ಸಾರಿದ್ದರಲ್ಲದೆ ತಳಸಮುದಾಯಗಳಲ್ಲಿ ಸ್ವಾಭಿಮಾನವನ್ನು ಜಾಗ್ರತಗೊಳಿಸಿದ್ದರು. ಜಾಗ್ರತಗೊಂಡ ಸಮುದಾಯಗಳು ತಮ್ಮ ನಿರಂತರ ಅನ್ವೇಷಣಾತ್ಮಕ ಸಿದ್ಧಾಂತವೊಂದನ್ನು ಕಟ್ಟಿಕೊಳ್ಳುವಂತೆ ಮಾಡಿದ್ದರು. ಮೊದಲ ಬಾರಿಗೆ ಬೆವರು ಸುರಿಸಿ ದುಡಿಯುವುದೆ ಪೂಜೆ, ಇದುವೆ ಮಹಾಮುಕ್ತಿಗೆ ರಹದಾರಿ. ಹೀಂಗಲ್ಲದೆ ಕೂದಲು ಸೀಳುವ ವಾಗ್ವಾದ ಆಡಂಬರದಿಂದೇನೂ ಸಾಧಿಸಲಾಗದು ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ತಮ್ಮನ್ನು ತಾವು ಪತಿತರು, ಪಾಪಿಷ್ಟರೆಂದು ಕೀಳರಿಮೆಗೆ ಬಿದ್ದು ಬಸವಳಿದಿದ್ದ ಶೋಷಿತ ಸಮುದಾಯಗಳಲ್ಲಿ ಬಸವಣ್ಣನವರು ಈ ನುಡಿಗಡಣಗಳು ಇನ್ನಿಲ್ಲದ ಬಲಛಲವನ್ನು ತಂದುಕೊಟ್ಟವು. ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯಾ, ಸಮಗಾರ ಹರಳಯ್ಯಾ, ಹಡಪದ ಅಪ್ಪಣ್ಣ, ಸೂಳೆ ಸಂಕವ್ವೆ, ಕಸಗುಡಿಸುವ ಸತ್ಯಕ್ಕ ಮುಂತಾದವರೆ ನಿಜವಾದ ದೃಷ್ಟಾರರು ಎಂದು ಸಾರಿ ಅವರಿಂದಲೆ ನವೀನತಮ ಬಟ್ಟೆಯೊಂದನ್ನು ಕಂಡರಿಸಿದ್ದರು. ದುಡಿಯುವ ಜನರು ಸಾಮುದಾಯಿಕವಾಗಿ ಕಟ್ಟಿಕೊಂಡಿದ್ದ ಇದನ್ನು ಲಿಂಗಾಯತ ಎಂದು ಕರೆದುಕೊಂಡರಲ್ಲದೆ ದೇವಾಲಯಗಳನ್ನು ಧಿಕ್ಕರಿಸಿ ಅಂಗದ ಮೇಲೆ ಕಟ್ಟಿಕೊಳ್ಳುವ ಇಷ್ಟಲಿಂಗವೆ ಪರಶಿವನ ಸಂಕೇತ. ಸ್ವಯಂ ಅರಿವು ಪಡೆದುಕೊಳ್ಳುವವರೆಗೆ ಇಷ್ಟಲಿಂಗವೆಂಬ ಕುರುಹು ಬೇಕು. ಅರಿವು ಕರಿಗೊಂಡೊಡನೆ ಇಷ್ಟಲಿಂಗದ ಹಂಗೂ ಬೇಕಿಲ್ಲ. ತನ್ನರಿವಿನ ಇರುವಿನಲ್ಲಿ ಲೋಕದ ಎಲ್ಲ ದಂದುಗದೊಂದಿಗೆ ಮುಖಾಮುಖಿಯಾಗುತ್ತ ಅದರಿಂದಲೂ ಅತೀತರಾಗುತ್ತ ಮುಂಚಲಿಸುವುದೆ ಮುಕ್ತಿ. ಮುಕ್ತಿ ಎಂಬುದು ನಿಲುಕಡೆಯಲ್ಲ. ಅದೊಂದು ಪ್ರಕ್ರಿಯೆ. ಆದಿ ಅಂತ್ಯಗಳಿಲ್ಲದ ಯಾನ. ಯಾನದ ಉದ್ದೇಶ ಯಾನವೇ ಹೊರತು ಬೇರಿಲ್ಲ. ಇದುವೇ ಶರಣ ಪ್ರಜ್ಞೆ ಎಂದರು. ಎಲ್ಲರೂ ಸೇರಿ ಈ ಮಾರ್ಗ ಕಟ್ಟಿಕೊಂಡಿದ್ದರಾದರೂ ಇದಕ್ಕೆ ಮೂಲಿಗನು ಬಸವಣ್ಣ ಎಂಬುದು ಅವರ ಪ್ರಾಂಜಲ ಮನದ ಅಭೀಪ್ಸೆಯಾಗಿತ್ತು. ಅವರೆಲ್ಲರಿಗೂ ಬಸವ ನಿಬ್ಬೆರಗಾಗಿಯೆ ಕಂಡಿದ್ದನು. ಹಡಪದ ಅಪ್ಪಣ್ಣ ಮಾತಿನಲ್ಲಿ ಹೇಳುವುದಾದರೆ:

ಹೆಸರಿಗೆ ಬಾರದ ಘನವ ಹೆಸರಿಗೆ ತಂದು, ನುಡಿದಾಡುವ ಕಿಸುವಾಯರ ಮಾತ ಕೇಳಲಾಗದು.

ಅಧ್ಯಾತ್ಮವನ್ನು ನಿಗೂಢೀಕರಿಸಿ ಇಲ್ಲದ್ದೊಂದು ಏನೋ ಇದೆಯೆಂದು ನಂಬಿಸಿ ಅದನ್ನೆ ಘನಗೊಳಿಸಿ ಶಬ್ದ ಸಂದಣಿಯನ್ನು ನೆರವಿಕೊಂಡು ವಾದಕ್ಕೆಳಸುವವರನ್ನು ಅಪ್ಪಣ್ಣನವರು ಕಿಸಬಾಯಿಗಳೆಂದು ತರಾಟೆಗೆ ತೆಗೆದುಕೊಳ್ಳುವರಲ್ಲದೆ ಅಂಥವರ ಮಾತು ಕೇಳಬಾರದೆಂದು ಎಚ್ಚರಿಸುತ್ತಾರೆ. ಜಗತ್ತನ್ನು ಮಾಯೆ ಎಂದು ಜರಿದವರನ್ನು ಸೂತಕಿಗಳೆಂದೂ ಸ್ಪಷ್ಟ ಪಡಿಸುವರಲ್ಲದೆ ವಾಗ್ದ್ವೈತಗಳಲ್ಲಿ ಬಿದ್ದು ಒದ್ದಾಡುವವರಿಗೆ ಬಸವ ಅರ್ಥವಾಗುವುದಿಲ್ಲ. ಕಲ್ಪಿತ ವಾಸ್ತವದ ಭ್ರಮೆಯನ್ನೆ ನಚ್ಚಿ ನಡೆಸುವ ಅಂಧಾನುಸಂಧಾನಿಗಳಿಗೆ ಬಸವ ಪ್ರಣೀತ ಮಾರ್ಗ ಅರ್ಥವೂ ಆಗುವುದಿಲ್ಲ. ಅಷ್ಟಕ್ಕೂ ಅವರ ದೇವೋದ್ಯಮದ ಅಂಗಡಿಗಳನ್ನೆ ಮುಚ್ಚಿಸಿದ ಬಸವಣ್ಣ ರುಚಿಸುವುದೂ ಇಲ್ಲ ಎನ್ನುತ್ತಾರೆ ಕ್ಷೌರಿಕ ವೃತ್ತಿ ಮಾಡಿಕೊಂಡಿದ್ದ ಅಪ್ಪಣ್ಣ. ಕ್ಷೌರಿಕ ಮುಖ ನೋಡುವುದು ಅಪಶಕುನ ಎಂಬಂತಹ ಕ್ರೂರ ಆಚರಣೆಗಳನ್ನು ರೂಢಿಸಿದ್ದ ವೈದಿಕರ ಬಣ್ಣ ಬಯಲು ಮಾಡಲೆಂದೆ ಬಸವಣ್ಣನವರು ಅಪ್ಪಣ್ಣನವರನ್ನು ತಮ್ಮ ಆಪ್ತ ಕಾರ್ಯದರ್ಶಿಯಾಗಿ ನೇಮಿಸಿಕೊಂಡು ಸದಾ ತಮ್ಮ ಬಳಿ ಇಟ್ಟುಕೊಂಡಿದ್ದರು. ಇಂಥ ಮಾರ್ಗದ ಹರಿಕಾರ ಬಸವಣ್ಣ ಎಂಬುದನ್ನು ಅವರ ಸಹೋದರಿ ಅಕ್ಕನಾಗಮ್ಮ ಹೇಳುತ್ತಾಳೆ.

ಬಸವ ಪ್ರಣೀತ ಲಿಂಗಾಯತವು ಬಸವನಿಂದ ಉದಿಸಿದೆ ಎಂದು ವಚನಗಳೇ ಸ್ಪಷ್ಟಪಡಿಸುತ್ತವೆ. ಭಕ್ತಿ, ಗುರುಲಿಂಗ ಜಂಗಮಾದಿ ಅಷ್ಟಾವರಣ ಮತ್ತು ಲಿಂಗಾಂಗ ಸಾಮರಸ್ಯದ ಶಿವಯೋಗವನ್ನು ಮೊದಲು ನೆಲೆಗೊಳಿಸಿದಾತ ಬಸವಣ್ಣ. ಅಷ್ಟೇ ಅಲ್ಲ, ಭಕ್ತರಲ್ಲಿ ಸಮಭಾವವನ್ನು ಅಂದರೆ ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸಿ ಮನುಷ್ಯರಲ್ಲಿ ಸಮಾನತೆಯನ್ನು ಮೊದಲ ಬಾರಿಗೆ ರೂಢಿಸಿದಾತ ಬಸವಣ್ಣನಲ್ಲದೆ ಅನ್ಯರಿಲ್ಲ. ಸಮಸಮಾಜದ ನಿರ್ಮಾಣದ ಕನಸಿಗ ಬಸವಣ್ಣನವರನ್ನು ಬಸವ ಜಯಂತಿಯಂದು ಮಾತ್ರವಲ್ಲದೆ ಬದುಕಿನುದ್ದಕ್ಕೂ ಬರಮಾಡಿಕೊಳ್ಳುವ ಮೂಲಕ ಲೋಕದಲ್ಲಿನ ಎಲ್ಲ ಬಗೆಯ ತಾರತಮ್ಯಗಳಿಗೆ ಅಂತ್ಯ ಹಾಡಬೇಕಿದೆ.

**■ ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ನಮ್ಮ ಮಾತಿಗೆ ಅರ್ಥ ಬರಬೇಕಾದರೆ ಮಾತನಾಡುವಷ್ಟೇ ಮಾತನಾಡದೆ ಇರುವುದೂ ಅಗತ್ಯ.
  —ಕೆ.ಪಿ.ಪೂರ್ಣಚಂದ್ರ ತೇಜಸ್ವಿ
- ಗುಡಿಯೊಳಗೆ ಕಣ್ಮುಚ್ಚಿ ಬೆಚ್ಚಗಿರುವರನೆಲ್ಲ/ ಭಕ್ತ ರಕ್ತವಹೀರಿ ಕೊಬ್ಬಿಹರನೆಲ್ಲ/ ಗಂಟೆ ಜಾಗಟೆಗಳಿಂ ಬಡಿದು ಕುತ್ತಿಗೆ ಹಿಡಿದು/ ಕಡಲಡಿಗೆ ತಳ್ಳಿರೈ ಶಂಖದಿಂ ನುಡಿದು.
  —ಕುವೆಂಪು
- ಹೃದಯ ವಿಶಾಲವಾಗಿದ್ದರೆ ಮಾತ್ರ ಅಲ್ಲಿ ನಿಜವಾದ ಜ್ಞಾನ ಹೊಮ್ಮುತ್ತದೆ.
  —ಸ್ವಾಮಿ ವಿವೇಕಾನಂದ
- ಬದುಕಿನ ಗದ್ದಲ ಹೆಚ್ಚಾಗಿದ್ದಾಗ ಬಹಳ ಜನರಿಗೆ ಸಾವಿನ ಸವಾಲು ಕೇಳಿಸುವುದಿಲ್ಲ.
  —ಗೋಪಾಲಕೃಷ್ಣ ಅಡಿಗ
- ಬದುಕು ಎನ್ನುವುದು ಬೈಸಿಕಲ್‌ನಂತೆ. ನಿಮ್ಮ ಸಮತೋಲನವನ್ನು ಉಳಿಸಿಕೊಳ್ಳಬೇಕೆಂದರೆ ಸೈಕಲ್ ತುಳಿಯುತ್ತಲೇ ಇರಬೇಕು.
  —ಆಲ್ಬರ್ಟ್ ಐನ್‌ಸ್ಟೀನ್
- ಮುಂದಿರುವ ಹುಣ್ಣಿಮೆಯ ಸೊಬಗನ್ನು ಸವಿಯದೆ, ಮುಂಬರಲಿರುವ ಅಮಾವಾಸ್ಯೆಯನ್ನು ನೆನೆದು ಕೊರಗುತ್ತಾ ಕೂರುವುದು ವಿವೇಕವೆನ್ನಿಸದು.
  —ಕೆ.ಎಸ್. ನಿಸಾರ್ ಅಹಮದ್